# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2678**

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 25-03-2022

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಕಛೇರಿಗಳನ್ನು ದಲ್ಲಾಳಿಗಳು ನಿಯಂತ್ರಿಸುತ್ತಿರುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಸಾರ್ವಜನಿಕರು ದಲ್ಲಾಳಿಗಳನ್ನು ಸಂಪರ್ಕಿಸದೇ ನೇರವಾಗಿ ಕಛೇರಿಯ ಅಧಿಕಾರಿ/ ಸಿಬ್ಬಂದಿಯವರನ್ನು ಭೇಟಿ ಮಾಡಿ ಅವರ ಕೆಲಸಗಳನ್ನು ಮಾಡಿಸಿಕೊಳ್ಳಬೇಕೆಂದು ಕಛೇರಿಯ ಆವರಣದಲ್ಲಿ ಸೂಚನಾ ಫಲಕಗಳನ್ನು ಹಾಕಲಾಗಿದೆ ಹಾಗೂ ಸಾರಿಗೆ ಇಲಾಖೆಯಲ್ಲಿ ಸಾರ್ವಜನಿಕರ ಅಹವಾಲು/ ಕುಂದು ಕೊರತೆಗಳನ್ನು ಆಲಿಸಿ ಪರಿಹಾರ ಕಂಡುಕೊಳ್ಳುವ ಕುರಿತು ಪ್ರತಿ ಮಂಗಳವಾರ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.<br><br>ಅಲ್ಲದೆ, ಸಾರ್ವಜನಿಕರಿಗೆ ಅವರುಗಳ ವಾಹನ ಅನುಜ್ಞಾ ಪತ್ರ ಮತ್ತು ವಾಹನ ನೋಂದಣಿಯ ಸ್ಮಾರ್ಟ್ ಕಾರ್ಡ್‌ಗಳನ್ನು ಅವರ ಮನೆಯ ವಿಳಾಸಗಳಿಗೆ ಅಂಚೆ ಸೇವೆಯ ಮೂಲಕ ತಲುಪಿಸಲಾಗುತ್ತಿದೆ. ಇಲಾಖೆಯಲ್ಲಿ ವಾಹನ್-4, ಸಾರಥಿ-4 ಮತ್ತು ಇ-ಪೇಮೆಂಟ್ ಆಫ್ ಟ್ಯಾಕ್ಸ್ ನಂತಹ ಆನ್‌ಲೈನ್ ಸೇವೆಗಳನ್ನು ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಜಾರಿಗೆ ತರಲಾಗಿದೆ. ಸಾರ್ವಜನಿಕರು ಕರ್ನಾಟಕ-1 ಹಾಗೂ ಬೆಂಗಳೂರು-1 ಗಳಲ್ಲಿ ವಾಹನ ವಿವರ/ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ. ಸಾರ್ವಜನಿಕರು ಕರ್ನಾಟಕದ ಯಾವುದೇ ಕಛೇರಿಯಲ್ಲಾದರೂ ನೋಂದಣಿ ಮತ್ತು ಡಿ.ಎಲ್. ಗೆ ಸಂಬಂಧಿಸಿದ ಸೇವೆಗಳನ್ನು ಪಡೆಯಬಹುದಾಗಿದೆ.<br><br>ಅಲ್ಲದೆ, ದಿನಾಂಕ: 01-11-2021 ರಿಂದ ಸಾರಿಗೆ ಇಲಾಖೆಯಲ್ಲಿನ ಮೂವತ್ತು ಸೇವೆಗಳನ್ನು ಆನ್‌ಲೈನ್ ಮೂಲಕ ಸಂಪರ್ಕರಹಿತ ಸೇವೆಗಳಾಗಿ ನಿರ್ವಹಿಸಲು ಅನುಷ್ಠಾನಗೊಳಿಸಲಾಗಿದೆ. ಇದರಿಂದಾಗಿ ವಾರ್ಷಿಕ ಅಂದಾಜು 40-50 ಲಕ್ಷ ಸಾರ್ವಜನಿಕರು ಕಛೇರಿಗಳಿಗೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ. |

| | | |
|---|---|---|
| | | ಸಾರಿಗೆ ಇಲಾಖೆಯ ಸೇವೆಗಳನ್ನು ಮತ್ತಷ್ಟು ನಾಗರೀಕ ಸ್ನೇಹಿ ಮಾಡುವ ನಿಟ್ಟಿನಲ್ಲಿ ಇ-ಆಡಳಿತ ವತಿಯಿಂದ ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ಸ್ಥಾಪನೆಗೊಂಡಿರುವ "ಗ್ರಾಮ ಒನ್" ಕೇಂದ್ರಗಳ ಮೂಲಕ ಹಾಗೂ ಬೆಂಗಳೂರು ನಗರ ವಾಸಿಗಳಿಗೆ ಅವರ ಮನೆ ಬಾಗಿಲಿಗೆ ಸೇವೆಗಳನ್ನು ನೀಡುವ ಉದ್ದೇಶ ಹೊಂದಿರುವ "ಜನಸೇವಕ" ಯೋಜನೆ ಅಡಿಯಲ್ಲಿ ಸದರಿ ಸೇವೆಗಳನ್ನು "ಗ್ರಾಮ್ ಒನ್" ಮತ್ತು "ಜನಸೇವಕ" ಯೋಜನೆಗಳಿಂದಲೂ ಸಹ ಪಡೆಯಲು ಹೆಚ್ಚಿನ ಪ್ರಚಾರ ಮಾಡಲಾಗುತ್ತಿದ್ದು, ಇದರಿಂದಾಗಿ ಪಂಚಾಯತ್ ಮಟ್ಟದಲ್ಲಿಯೂ ಸಹ ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಭೇಟಿ ನೀಡದೇ ಸಂಪರ್ಕರಹಿತವಾಗಿ ಸೇವೆಗಳನ್ನು ಪಡೆಯಬಹುದಾಗಿದೆ.<br><br>ಡಿಎಲ್ ಮತ್ತು ಆರ್ ಸಿ ಕಾರ್ಡ್ ಗಳನ್ನು ಮುದ್ರಿಸಲು ಪ್ರಸ್ತುತ ಇರುವ ವ್ಯವಸ್ಥೆಯನ್ನು ಮಾರ್ಪಾಡು ಮಾಡಿ ಕೇಂದ್ರಿಕೃತ ವ್ಯವಸ್ಥೆಯಡಿಯಲ್ಲಿ ಮುದ್ರಿಸಿ ರವಾನಿಸಲು ನೆಲಮಂಗಲ RTO ಕಛೇರಿಯಲ್ಲಿ ಸ್ಥಳ ಗುರುತಿಸಲಾಗಿದ್ದು, ಕೂಡಲೇ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಕಾರ್ಡ್ ಗಳನ್ನು Speed Post ಮುಖಾಂತರ ನೇರವಾಗಿ ಅರ್ಜಿದಾರರಿಗೆ ಸಂಪರ್ಕರಹಿತ ಮಾದರಿಯಲ್ಲಿ ರವಾನಿಸಲು Postal ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳು ಪ್ರಕ್ರಿಯೆ ಪರಿಶೀಲನೆಯಲ್ಲಿರುತ್ತದೆ ಹಾಗೂ ಖಾಸಗಿ ಸರಬರಾಜುದಾರರೊಂದಿಗೆ ಈ ಹಿಂದೆ ಮಾಡಿಕೊಂಡಿರುವ ಒಪ್ಪಂದವನ್ನು ಮೇಲಿನಂತೆ ಕೇಂದ್ರಿಕೃತ ವ್ಯವಸ್ಥೆಯಲ್ಲಿ ಮುದ್ರಿಸುವ ಸಂಬಂಧ ಸೂಕ್ತ ಮಾರ್ಪಾಡು ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>ಆದಾಗ್ಯೂ ಈ ಕುರಿತು ದೂರುಗಳು ಸ್ವೀಕೃತವಾದಲ್ಲಿ ಸಂಬಂದಪಟ್ಟವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು. |
| ಆ. | ಮೋಟಾರು ವಾಹನ ನಿರೀಕ್ಷಕ ಹುದ್ದೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿ ಹುದೆಯ ವರ್ಗಾವಣೆಗೆ ಹಣಕಾಸಿನ ವ್ಯವಹಾರ ನಡೆಯುತ್ತಿದ್ದು ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಮೋಟಾರು ವಾಹನ ನಿರೀಕ್ಷಕರ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವರ್ಗಾವಣೆಗಳನ್ನು ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ನಿಯಮಾನುಸಾರ ಮಾಡಲಾಗಿರುತ್ತದೆ. ಯಾವುದೇ ಹಣಕಾಸಿನ ವ್ಯವಹಾರ ನಡೆಯುತ್ತಿರುವ ಬಗ್ಗೆ ಮಾಹಿತಿ ಇರುವುದಿಲ್ಲ. |
| ಇ. | ಕಛೇರಿಯ ಕಡತಗಳನ್ನು ಕಿರಾಣಿ ಅಂಗಡಿ ಮತ್ತು ಬ್ರೋಕರ್‌ಗಳಿಗೆ ನೀಡಿ ಲಂಚ ಸ್ವೀಕೃತಿಯಾದ ಬಳಿಕ ದಾಖಲೆಗಳನ್ನು ಅರ್ಜಿದಾರರಿಗೆ ನೀಡುತ್ತಿರುವ ಕುರಿತು ಸರ್ಕಾರ ಪರಿಶೀಲನೆ ನಡೆಸಿದೆಯೇ; ಈ | ಕ್ರ.ಸಂ. (ಅ) ರಲ್ಲಿನ ಪ್ರಶ್ನೆಗೆ ನೀಡಿರುವ ಉತ್ತರದಂತೆ |

| | | |
|---|---|---|
| | ಕುರಿತು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ / ವರದಿಗಳ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು; | ಕ್ರಮ ಕೈಗೊಳ್ಳಲಾಗಿರುತ್ತದೆ. |
| ಈ. | ಕಳೆದ 3 ವರ್ಷಗಳಲ್ಲಿ ಎಷ್ಟು ಆರ್.ಟಿ.ಓ. ಕಛೇರಿಗಳ ತಪಾಸಣೆ ನಡೆಸಲಾಗಿದೆ; ಆರ್.ಟಿ.ಓ. ಕಛೇರಿಗಳನ್ನು ಬ್ರೋಕರ್‌ಗಳಿಂದ ಮುಕ್ತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಸಾರಿಗೆ ಇಲಾಖೆಯಲ್ಲಿ ಜಂಟಿ ಸಾರಿಗೆ ಆಯುಕ್ತರ 6 ವಿಭಾಗಗಳು ಹಾಗೂ ಅಪರ ಸಾರಿಗೆ ಆಯುಕ್ತರು (ಪ್ರವರ್ತನ) 2 ವಿಭಾಗಗಳಿದ್ದು, ಸದರಿ ಅಧಿಕಾರಿಗಳು ನಿಯಮಿತವಾಗಿ ತಮ್ಮ ವಿಭಾಗಕ್ಕೆ ಒಳಪಡುವ ಸಾರಿಗೆ ಕಛೇರಿಗಳಿಗೆ ಭೇಟಿ ನೀಡಿ ತಪಾಸಣೆ ಮಾಡುತ್ತಿರುತ್ತಾರೆ. ಅಲ್ಲದೆ, ಇಲಾಖೆಯ ಮುಖ್ಯಸ್ಥರಾದ ಆಯುಕ್ತರು ಕೂಡ ಸಾರಿಗೆ ಕಛೇರಿಗಳಿಗೆ ಭೇಟಿ ನೀಡಿ ತಪಾಸಣೆ ಮಾಡುತ್ತಿರುತ್ತಾರೆ. |

ಟಿಡಿ 64 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.